ದಿನಾಂಕಃ 07-08-2023 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಪಾಟಿ ಸವಾಲುಃ- ಎದುರುದಾರ ಪರ ಶ್ರೀ ಕೆವಿಸಪಿ ವಕೀಲರಿಂದ

ಹನುಮಂತಪ್ಪ ಬೆಳಗಾಲ ನನ್ನ ತಂದೆ ಎಂದರೆ ಸರಿ. ನನ್ನ ತಂದೆಗೆ ಇಬ್ಬರು ಹೆಂಡತಿಯರು ಎಂದರೆ ಸರಿಯಲ್ಲ. ಹನುಮಂತಪ್ಪನಿಗೆ ನೀಲವ್ವ ಮತ್ತು ಕಾಳವ್ವ ಎಂಬ ಇಬ್ಬರು ಹೆಂಡತಿಯರು ಎಂದರೆ ನೀಲವ್ವ ಮಾತ್ರ ಹೆಂಡತಿ. ಎದುರುದಾರರು ನನ್ನ ತಂದೆಯ ಮಕ್ಕಳು ಎಂದರೆ ಸರಿಯಲ್ಲ. ಎದುರುದಾರರು ಇವತ್ತಿನವರೆಗೂ ಲಕ್ಕಿಕೊಪ್ಪ ಗ್ರಾಮದ ವಿಪಿಸಿ ಸಂಖ್ಯೆ 3 ರಲ್ಲಿ ವಾಸವಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

ಎದುರುದಾರರು ನಮ್ಮ ತಂದೆಯ ಆಸ್ತಿಯಲ್ಲಿ ಹಿಸ್ಸೆ ಕೇಳಿ ಅಸಲು ದಾವಾ ಸಂಖ್ಯೆ 99/2014 ದಾವೆ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಆ ದಾವೆಯಲ್ಲಿ ನಾವು ನಮ್ಮ ಪರವಾಗಿ ಶ್ರೀ ಎಂ.ಎಂ ಬಾರ್ಕಿ ವಕೀಲರನ್ನು ನೇಮಕ ಮಾಡಿಕೊಂಡಿದ್ದೆವು ಎಂದರೆ ಸರಿ. ಆ ದಾವೆಯಲ್ಲಿ ನಾವು ತಕರಾರು ಹಾಕಿರಲಿಲ್ಲ ಎಂದರೆ ಸಾಕ್ಷಿಯು ತಕರಾರು ಕೊಟ್ಟಿದ್ದೆವು ಆದರೆ ನಮ್ಮ ವಕೀಲರು ದಾವೆಯ ಮಾಹಿತಿ ನೀಡಲಿಲ್ಲ ಎಂದು ನುಡಿದಿದ್ದಾರೆ. ಆ ದಾವೆಯಲ್ಲಿ ಎದುರುದಾರ ಪರವಾಗಿ ಡಿಕ್ರಿ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಅದಾದ ನಂತರ ಎದುರುದಾರರು ಎಫಡಿಪಿ ಸಂಖ್ಯೆ 4/2019 ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಆ ಪ್ರಕರಣದಲ್ಲಿ ನಾನು ನನ್ನ ಪರವಾಗಿ ಶ್ರೀ ಬಿ.ಪಿ. ಗುಂಡಣ್ಣವರ ವಕೀಲರನ್ನು ಹಾಗೂ 1 ಮತ್ತು 2 ನೇ ಮೇಲ್ಮನವಿದಾರರು ಶ್ರೀ ಎಂ.ಎನ್ ಕ್ಯಾಲಕೊಂಡ ವಕೀಲರನ್ನು ನೇಮಕ ಮಾಡಿಕೊಂಡಿದ್ದೆವು ಎಂದರೆ ಸರಿಯಲ್ಲ. ಆ ಸಮಯದಲ್ಲಿ ಅಸಲು ದಾವಾ ಸಂಖ್ಯೆ

99/2014 ರಲ್ಲಿ ಆದ ಡಿಕ್ರಿ ಬಗ್ಗೆ ವಕೀಲರು ನಮಗೆ ತಿಳಿಸಿದ್ದರು ಎಂದರೆ ಸರಿಯಲ್ಲ. ನಾವು ನಮ್ಮ ಕೇಸನ್ನು ಬಾರ್ಕಿ ವಕೀಲರಿಗೆ ಮಾತ್ರ ಕೊಟ್ಟಿದ್ದು ಆನಂತರ ಅವರು ಪ್ರಕರಣದ ಮಾಹಿತಿಯನ್ನು ನಮಗೆ ಕೊಟ್ಟಿರುವುದಿಲ್ಲ.

ಎಫಡಿಪಿ ಸಂಖ್ಯೆ 4/2019 ಚಾಲ್ತಿಯಲ್ಲಿ ಇರುವಾಗ ನಾನು ಮತ್ತು ಇತರೇ ಮೇಲ್ಮನವಿದಾರರು ಕೂಡಿಕೊಂಡು ದಿಃ 16.04.2019 ರಂದು ಲಕ್ಕಿಕೊಪ್ಪ ಗ್ರಾಮದ ರಿ ಸ ಸಂಖ್ಯೆ 5/3 ಕ್ಷೇತ್ರ 1 ಎಕರೆ 12 ಗುಂಟೆ ಜಮೀನನ್ನು ಗೌರವ್ವ ಪಕ್ಕೀರಪ್ಪ ಮಾಯಣ್ಣನವರ ರವರಿಗೆ ಮಾರಾಟ ಮಾಡಿದ್ದೇವೆ ಎಂದರೆ ಸರಿ. ಆನಂತರ ಎದುರುದಾರರು ಆ ಖರೀದಿ ಪತ್ರ ಪ್ರಶ್ನಿಸಿ ನಮ್ಮ ವಿರುದ್ದ ಹಾಗೂ ಗೌರವ್ವ ಪಕ್ಕೀರಪ್ಪ ಮಾಯಣ್ಣನವರ ರವರ ವಿರುದ್ಧ ಅಸಲು ದಾವಾ ಸಂಖ್ಯೆ 49/2019 ದಾವೆ ಹಾಕಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಆ ಕೇಸಿನ ಮುದ್ದತ್ತು ಇವತ್ತು ಎಂದರೆ ನನಗೆ ಗೊತ್ತಿಲ್ಲ.

ಈ ಹಂತದಲ್ಲಿ ಎದುರುದಾರ ಪರ ಶ್ರೀ ಕೆಎಸಪಿ ವಕೀಲರ ಕೋರಿಕೆಯ ಮೇರೆಗೆ ಪಾಟಿ ಸವಾಲು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೆ.ಕೆ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಮ್ ಎಫ್ ಸಿ, ಶಿಗ್ಗಾಂವ.

ಆರ್ ಎ ನಂ. 5/2020
ಪಿ ಡಬ್ಲು 1